ಇಂದು ದಿ: **08.01.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರಃ ಶ್ರೀ ಎಂ. ಎಸ್. ಎಸ್. ವಕೀಲರಿಂದ

ವಾದಿಯ ಮಾವ ಹನುಮಂತಪ್ಪ ಈ ನ್ಯಾಯಾಲಯದಲ್ಲಿ ಒಂದು ಕೇಸನ್ನು ಸಲ್ಲಿಸಿರುತ್ತಾನೆ ಎನ್ನುವುದು ನಿಜ. ಸದರಿ ಕೇಸಿನಲ್ಲಿ ನನ್ನ ವಿಚಾರಣೆ ಆಗಿರುತ್ತದೆ ಎನ್ನುವುದು ನಿಜ. ಸದರಿ ಕೇಸಿನಲ್ಲಿ ನನ್ನ ಸಾಕ್ಷಿಯಲ್ಲಿರುವ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ವಾದಿ ಪರ ವಕೀಲರು ಸಿಸಿ. 208/2023 ರ ಡಿ.ಡಬ್ಲ್ಯೂ 01 ರವರ ಸಾಕ್ಷಿಯ ದೃಡೀಕೃತ ನಕಲನ್ನು ತೋರಿಸಲಾಗಿ, ಸಾಕ್ಷಿ ಸದರಿ ದೃಢೀಕೃತ ನಕಲಿನಲ್ಲಿರುವ 1 ರಿಂದ 8 ಹಾಗೂ 11 ರಿಂದ 13 ನೇ ಪುಟದಲ್ಲಿರುವ ಸಹಿಗಳು ನನ್ನವು, ಪುಟ ಸಂಖ್ಯೆ 09 ಮತ್ತು 10 ರಲ್ಲಿ ಇವರು ಸಹಿಗಳು ನನ್ನವು ಅಲ್ಲ ಎಂದು ಹೇಳಿರುವುದರಿಂದ, ಸದರಿ ಸಾಕ್ಷಿಯ ದೃಢೀಕೃತ ನಕಲನ್ನು ನಿಪಿಃ 14 ಎಂದು ಗುರುತಿಸಲಾಯಿತು. ಸಾಕ್ಷಿಗೆ ವಾದಿ ಪರ ವಕೀಲರು ಈ ಕೇಸಿನ ಡಿ.ಡಬ್ಲ್ಯೂ-1 ರವರ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ಸಹಿಗಳನ್ನು ತೋರಿಸಲಾಗಿ, ಸಾಕ್ಷಿ ಸದರಿ ಸಹಿಗಳನ್ನು ನೋಡಿ ನನ್ನ ಸಹಿಗಳು ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನೇನು ವಿಷಯಗಳನ್ನು ಬರೆದಿರುತ್ತದೆ ಎಂದು ಗೊತ್ತಿರುವುದಿಲ್ಲ. ಬಡ್ಡಿಗೋಸ್ಕರ ಸಾಲವನ್ನು ವಾದಿಯಿಂದ ಪಡೆದುಕೊಂಡಿರುತ್ತೇನೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ಹನುಮಂತಪ್ಪನಿಂದ ಬಡ್ಡಿಗೋಸ್ಕರ ಸಾಲವನ್ನು ತೆಗೆದುಕೊಂಡಿರುವುದಕ್ಕೆ ದಾಖಲೆಗಳು ಇರುವುದಿಲ್ಲ. ವಾದಿ ಈ ದಾವೆಯನ್ನು ನನ್ನ ಮತ್ತು ನನ್ನ ತಾಯಿಯ ವಿರುದ್ಧ ಸಲ್ಲಿಸಿರುತ್ತಾನೆ. ಹೊಸದುರ್ಗದ ಮರುಳಸಿದ್ದಪ್ಪನ ಮಗ ಹರ್ಷ ಗೊತ್ತು, ಮಗಳು ಸುಮ ಗೊತ್ತಿರುವುದಿಲ್ಲ. ಸದರಿ ಹರ್ಷ ಮತ್ತು ಸುಮ ಇವರನ್ನು ಈ ದಾವೆಯಲ್ಲಿ ವಾದಿ ಯಾವ ಕಾರಣಕ್ಕೆ ಸೇರಿಸಿರುತ್ತಾನೆ ಎಂದು ಗೊತ್ತಿರುವುದಿಲ್ಲ. ದಾವಾ ಆಸ್ತಿಯನ್ನು ಹರ್ಷ ಇವರಿಗೆ ನಾವೆಲ್ಲರು ಸೇರಿ ಮಾರಾಟ ಮಾಡಿರುತ್ತೇವೆ. ಮಾರಾಟ ಮಾಡುವ ಮೊದಲು ಹರ್ಷ ಇವನೊಂದಿಗೆ ಕರಾರು ಪತ್ರ ಆಗಿತ್ತು ಅಥವಾ ಇಲ್ಲವೆಂದು ನಮ್ಮ ಅಣ್ಣನಿಗೆ ಗೊತ್ತು. ದಾವಾ ಆಸ್ತಿ ಯನ್ನು ವಾದಿಗೆ ಮಾರಾಟ ಮಾಡಲು ನಮ್ಮ ತಾಯಿ ಕರಾರು ಪತ್ರ ಮಾಡಿ ಕೊಟ್ಟಿದ್ದು, ನಮಗೆ ನೋಟೀಸು ಬಂದ ಮರುದಿನವೇ ಕ್ರಯ ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ಉಳಿದ ಪ್ರತಿವಾದಿಗಳು ಮಿಲಾಪೆಯಾಗಿ ವಾದಿಗೆ ಮೋಸ ಮಾಡುವ ಸಲುವಾಗಿ ಕ್ರಯ ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ತಾಯಿ ಮತ್ತು ವಾದಿಯ ಮಧ್ಯೆ ಕರಾರು ಪತ್ರ ಆಗಿರುವ ವಿಷಯ 4 ಮತ್ತು 5 ನೇ ಪ್ರತಿವಾದಿಗಳಿಗೆ ಗೊತ್ತಿದ್ದರು ಸಹ ವಾದಿಗೆ ಮೋಸ ಮಾಡುವ ಸಲುವಾಗಿ ಕ್ರಯ ಪತ್ರ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಕರಾರು ಪತ್ರ ಬರೆದುಕೊಟ್ಟ ನಂತರ ಸರ್ವೇ ಸ್ಕೆಚ್ ಆದ ಒಂದು ತಿಂಗಳಿಗೆ ಕ್ರಯ ಪತ್ರ ನೊಂದಣಿ

ಮಾಡಿಕೊಡುತ್ತೇವೆ ಎಂದು ಹೇಳಿದ್ದೇವು ಎಂದರೆ ಸರಿಯಲ್ಲ. ಕ್ರಯದ ಬಾಬ್ತು ಉಳಿದ 14 ಲಕ್ಷ ರೂ.ಗಳನ್ನು ನಾನು ಕೊಡಲು ತಯಾರಿ ಇರುತ್ತೇನೆ ಸ್ಕೆಚ್ ಆದ ತಕ್ಷಣ ನನಗೆ ತಿಳಿಸಿ ಎಂದು ವಾದಿ ಹೇಳಿದ್ದ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ಈ ಜಮೀನಿನ ವಿಚಾರವಾಗಿ ಫೋನಿನಲ್ಲಿ ಮಾತನಾಡಿರುತ್ತೇವೆ ಎಂದರೆ ಸಾಕ್ಷಿ ಬೇರೆ ಜಮೀನಿನ ವಿಚಾರವಾಗಿ ಮಾತನಾಡಿರುತ್ತೇವೆ ಎಂದು ಹೇಳುತ್ತಾರೆ. ಆ ಸಮಯದಲ್ಲಿ ನನ್ನ ಮತ್ತು ವಾದಿಯ ವಿಶ್ವಾಸ ಚೆನ್ನಾಗಿತ್ತು ಎನ್ನುವುದು ನಿಜ. ನನ್ನ ಮೊಬೈಲ್ ನಂ. 9480128039 ಇರುತ್ತದೆ. ನನ್ನ ಮೊಬೈಲ್ ನಲ್ಲಿ ವಾದಿಯ ನಂಬರ್ ಇರುತ್ತದೆ ಎನ್ನುವುದು ನಿಜ. ದಾವಾ ಸ್ವತ್ತು ಮತ್ತು ಕರಾರಿಗೆ ಸಂಬಂಧಪಟ್ಟಂತೆ ಹಲವಾರು ಬಾರಿ ನಾನು ಫೋನಿನಲ್ಲಿ ವಾದಿಯೊಂದಿಗೆ ಮಾತನಾಡಿರುತ್ತೇನೆ ಎಂದರೆ ಸಾಕ್ಷಿ ಈ ಸ್ವತ್ತಿಗೆ ಅಲ್ಲ ಬೇರೆ ಸ್ವತ್ತನ್ನು ನೋಡು ಎಂದು ಅವರು ಹೇಳಿದ್ದರಿಂದ ಮಾತನಾಡಿರುತ್ತೇನೆ ಎಂದು ಹೇಳುತ್ತಾರೆ. 2020 ಜುಲೈ ತಿಂಗಳಲ್ಲಿ ನಾನು ವಾದಿ ಮಾತನಾಡಿರುತ್ತೇವೆ. ದಿಃ 03.09.2018 ರಿಂದ ನಾನು ಮತ್ತು ವಾದಿ ದಾವಾ ಆಸ್ತಿಯ ಕ್ರಯದ ಕರಾರಿಗೆ ಸಲುವಾಗಿ ಫೋನಿನಲ್ಲಿ ಸಂಪರ್ಕದಲ್ಲಿರುತ್ತೇವೆ ಎಂದರೆ ಸರಿಯಲ್ಲ. ದಿಃ 03.09.2018 ರಿಂದ 2020 ಜುಲೈವರೆಗೆ ನಾನು ವಾದಿಯೊಂದಿಗೆ ಸಂಪರ್ಕದಲ್ಲಿ ಇರಲಿಲ್ಲ. ವಾದಿ ಹಾಕಿರುವ ದಾವೆ ಸತ್ಯ ಸಂಗತಿಯಿಂದ ಕೂಡಿದ್ದರು ಸಹ ಅವನಿಗೆ ಮೋಸ ಮಾಡುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾಯಿ ನ್ಯಾಯಾಲಯಕ್ಕೆ ಬಂದರೆ ಸತ್ಯ ಗೊತ್ತಾಗುತ್ತದೆ ಎನ್ನುವ ಕಾರಣ ನಾನು ಅವರ ಪರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮ್ಮ ತಾಯಿಯನ್ನು ಹೊರತು ಪಡಿಸಿ ನನಗೆ, ನಮ್ಮ ಅಣ್ಣನಿಗೆ ಮತ್ತು ನಮ್ಮ ಅಕ್ಕನಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿಗೆ ಹಕ್ಕು ಇದ್ದ ಕಾರಣ, ನಮ್ಮ ತಾಯಿಯಿಂದ ವಾದಿ ಕರಾರು ಪತ್ರ ಬರೆಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನಮ್ಮ ತಾಯಿ ಬರೆದುಕೊಟ್ಟ ಕರಾರು ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿ ಕರಾರು ಪತ್ರದಂತೆ ನಡೆದುಕೊಳ್ಳಲು ತಯಾರಿ ಇದ್ದರು ಸಹ ನಾವು ಅವನಿಗೆ ಮೋಸ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಕರಾರು ಪತ್ರದಲ್ಲಿನ ಷರತ್ತುಗಳನ್ನು ನಾವೇ ಉಲ್ಲಂಘನೆ ಮಾಡಿ ವಾದಿಗೆ ಮೋಸ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ನಮ್ಮ ಲಿಖಿತ ಹೇಳಿಕೆಯಲ್ಲಿನ ವಿಷಯಗಳೆಲ್ಲವು ಸುಳ್ಳು ಇರುತ್ತವೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.